doc- 522
T.P-2

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ

ಅ ಶೋ ಕಾ ಫಾ ರ್ಮ ಸಿ

ಅ್ಯಾನ್ಸ್‌ಡೌನ್ ಬಜಾರ್, ಮೈಸೂರು

For Quality Printing

L. N. Press

Sivarampet, Mysore

Regd No M 1299 — SRI — 28—1—1958

42nd Year - 'Satyavadi' Mysore

ಸತ್ಯವಾದಿ

ಸಂಸ್ಥಾಪಕರು— ಅಂಬುಜೆ ಸಿಂಹೇದಾರ್ ಎ. ವಿ ಸುಬ್ಬರಾಯರು. [ಬಿಡಿಪ್ರತಿ 3 ಪೈ

ಪ್ರಮುಖ ವರ್ತಮಾನಗಳಿಗೆ

ಆಕರ್ಷಣೀಯ ಲೇಖನಗಳಿಗೆ

" ಸತ್ಯವಾದಿ " ಪತ್ರಿಕೆಯನ್ನು

ತಪ್ಪದೇ ಓದಿ

ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ ವಾರಾಂತ್ಯ ಪತ್ರಿಕೆ

ವಾರ್ಷಿಕಚಂದಾ ಅಂಚೆವೆಚ್ಚ ಸೇರಿ 1-80

ಪೌರಸಭಾಧ್ಯಕ್ಷರಾಗಿ ಶ್ರೀ ಬಿ. ನಾರಾಯಣಸ್ವಾಮಿಯವರ ಆಯ್ಕೆ

ಶ್ರೀ ಡಿ. ಲಿಂಗಯ್ಯನವರು ಉಪಾಧ್ಯಕ್ಷರು

ಮೈಸೂರು 28 — ಮೈಸೂರು ಪೌರಸಭೆಯ ವಿಶೇಷ ಸಭೆ ಈ ದಿನ ಬೆಳಿಗ್ಗೆ ಮೈಸೂರು ಜಿಲ್ಲಾಧಿಕಾರಿಯವರಾದ ಶ್ರೀ ಎಚ್ ನರಸಿಂಹರಾವ್‌ರವರ ಅಧ್ಯಕ್ಷತೆಯಲ್ಲಿ 1958 ನೆಯ ಸಾಲಿಗೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಚುನಾಯಿಸಲು ಸಮಾವೇಶವಾಗಿತ್ತು.

ಸಂಯುಕ್ತ ಪಾರ ಪಕ್ಷದ ಸದಸ್ಯರು ಚ ನಾವಣೆಯ ನ್ನು ಬಹಿಷ್ಕರಿಸಿರುವದಾಗಿ ಬರೆದಿದ್ದ ಪತ್ರವನ್ನು ಸಭೆಯ ಗವ ನಕ್ಕೆ ತಂದು ಪ್ರಾವಿಷ್ಟ ಇಲ್ಲವಾದುದ ರಿಂದ ಅದನ್ನು ದಾಖಲು ಮಾಡುವುದಿ ಲ್ಲವೆಂದು ತಿಳಿಸಿದರು.

ಶ್ರೀ ಬಿ ನಾರಾಯಣಸ್ವಾಮಿಯವ ರು ಅಧ್ಯಕ್ಷ ಚುನಾವಣೆಗೆ ಏಕಮಾತ್ರ ಉಮೇದುವಾರರಾಗಿದ್ದರಿಂದ ಅವರು ಚು ನಾಯಿತರಾದರೆಂದು ಅಧ್ಯಕ್ಷರು ಘೋ ಷಿಸಿ. ಅಧ್ಯಕ್ಷತೆಯನ್ನು ಸ್ವೀಕರಿಸು ವಂತೆ ಕೋರಿದರು.

ಶ್ರೀ ಎಚ್. ನರಸಿಂಹರಾವ್‌ರವರು ಅ ಧ್ಯಕ್ಷರ ನಾನಾ ಸೇವೆಗಳ ಬಗ್ಗೆ ಪ್ರಶಂ ಸಿಸಿ ಅವರಿಗೆ ಯಶಸ್ಸು ಕೋರಿದರು.

ಶ್ರೀ ಬಿ ನಾರಾಯಣಸ್ವಾಮಿಯವ ರು ಅಧ್ಯಕ್ಷತೆಯನ್ನು ವಹಿಸಿ ಉಪಾಧ್ಯ ಕ್ಷ ಚ ನಾವಣೆಯನ್ನು ನಿರ್ವೇರಿಸಿದರು ಏಕಮಾತ್ರ ಉಮೇದುವಾರರಾಗಿದ್ದ ಶ್ರೀ ಡಿ ಲಿಂಗಯ್ಯನವರು ಉಪಾಧ್ಯಕ್ಷ ರಾಗಿ ಚುನಾಯಿತರಾದರೆಂದು ಅಧ್ಯಕ್ಷ ರು ಘೋಷಿಸಿದರು.

ಶ್ರೀ ಬಿ ನಾರಾಯಣಸ್ವಾಮಿಯವ ರನ್ನು ಮತ್ತು ಶ್ರೀ ಡಿ. ಲಿಂಗಯ್ಯನವ ರನ್ನು ಸದಸ್ಯರು ಅಭಿನಂದಿಸಿದರು.

ತನ್ನ ಬಗ್ಗೆ ಅಭಿಮಾನ ವ್ಯಕ್ತಪಡಿಸಿ ದ್ದಕ್ಕೆ ವಂದಿಸಿ ಅಧ್ಯಕ್ಷ ಉಪಾಧ್ಯಕ್ಷ ರವರು ಸಹಕಾರವನ್ನು ಕೋರಿದರು.

ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ಶ್ರೀನಿವಾಸಚಾರಿಯವರಿಗೆ 'ಚೊರಿ ಇರಿಕ

ತಿರುಚಿರಪಳ್ಳಿ 27 — ಶ್ರೀ ಇ. ವಿ ರಾಮಸ್ವಾಮಿ ನಾಯ್ಕರ ಮೇಲೆ ಮೊ ಕದ್ದಮೆ ನಡೆಸಿದ ಶ್ರೀ ಇ ವಿ ಶ್ರೀನಿವಾ ಸಚಾರಿಯವರು ಶ್ರೀರಂಗಲ್ಲಿನ ಚಿತ್ರಾ ರಸ್ತೆಯಲ್ಲಿ ಗಣರಾಜ್ಯ ದಿನಾಚರಣೆ ಮು ಗಿಸಿಕೊಂಡು ರಾತ್ರಿ 8-30 ಗಂಟೆಯಲ್ಲಿ ತಮ್ಮ ಕಾರಿನಲ್ಲಿ ಮನೆ ಮುಂದೆ ಬಂದಿಳಿ ದಾಗ ಸಮಾರು 20 ವರ್ಷದ ಕರೀಬಣ್ಣ ದ ಅಗುಂತಕಸೋರ್ವನು ಅವರ ಮುಖ ದ ಮೇಲೆ ದ್ರಾವಕ ಎಸೆದು ಬಲ ಭುಜ ವನ್ನು ಹೊಟ್ಟೆಯ ಬಲಭಾಗಕ್ಕೆ ಚೂರಿ ಯಿಂದ ಇರಿದು ಪರಾರಿ ಆದನು ಅವರ ನ್ನು ಕೂಡಲೇ ಇಲ್ಲಿನ ಸರ್ಕಾರಿ ಆಸ್ಪ ತ್ರೆಗೆ ಸೇರಿಸಲಾಗಿದೆ ಆಸ್ಪತ್ರೆಗೆ ಬಂದಿಸಿದವರು ಗಾಯ ಬಲವಾಗಿದ್ದರೂ ಗುಣಮುಖರಾಗುತ್ತಿದ್ದಾರೆ ಕೊಲೆ ಮೊಕದ್ದಮೆ ಸಂಬಂಧದಲ್ಲಿ ಇಲ್ಲಿಗೆ ಪೋಲಿಸರು ನಾಯಿಗಳು ಮದರಾಸಿನಿಂದ ಬಂದಿವೆ.

——

ಹೈದರಾಬಾದ್ 27 — 1958-59 ನೆಯ ಸಾಲಿದಲ್ಲಿ ಖೋತಾ ಆಂದಾಜ ಪಟ್ಟಿ ಮಂಡಿಸದಂತೆ ಖರ್ಚು ಆದಾಯ ಗಳನ್ನು ಸಮತೂಕ ಮಾಡಬೇಕೆಂದು ಕೇಂದ್ರ ಪ್ರಾಂತಗಳಿಗೆ ಒತ್ತಾಯಪೂರ್ವಕ ಸೂಚನೆ ಕೊಟ್ಟಿರುವುದಾಗಿ ಗೊತ್ತಾಗಿದೆ.

ನಾಳೆಯ ಪಂಚಾಂಗ

ಆ|| ಮಹಾವಿದ್ವಾನ್ 'ದೈವಜ್ಞಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ
29 ನವಮಿ ಕೃತ್ತಿಕ

ಮಾಸೆ ಸಮಿತಿ

ಸಿಂಗಪುರ 27 — ಸಂಯುಕ್ತ ಮ ಲಯಾದ ರಾಷ್ಟ್ರೀಯ ಸಂಸ್ಥೆ ಸಾಧಾ ರಣವಾಗಿ ಕುಳ್ಳಗಿರುವ ಮಲಯ ನರನ್ನ ಮತ್ತಷ್ಟು ವನುಷ್ಯರನ್ನಾಗಿ ಮಾಡಲು ಯೋಜನೆ ಮಾಡಿದೆ. ಇದಕ್ಕೆ ಪರಿ ಹಾರ ಎಂದರೆ ಮಾಸೆ ಎಂದು ಅದರ ಅ ಭಿಪ್ರಾಯ. ಅದ್ಭುತ ಪ್ರಚಾರಕ್ಕೋಸ್ಕರ ಮಾಸೆ ಸ್ಪರ್ಧೆ ಏರ್ಪಡಿಸಿದೆ. ಈ ವೀ ರಾಗ್ರೆ ಸಂತನನ್ನು ನಿರ್ಧರಿಸಲು, ಓರ್ವ ಮಹಿಳೆ, ಓರ್ವ ನಾಯಿಂದ ಮತ್ತು ಓರ್ವ ಸಿಪಾಯಿ ಇರುವ ಸಮಿತಿ ರಚಿತ ವಾಗಿದೆ.

——

ಬೊಂಬಾಯಿ ನಗರದಲ್ಲಿ ರಿಪಬ್ಲಿಕ್ ಡೇಯಂದು ಆದ ರಸ್ತೆ ಅವಘಡದಲ್ಲಿ ಒ ಬ್ಬ ಸತ್ತು 6 ಮಂದಿ ಗಾಯಗೊಂಡರು.

ಮದ್ರಾಸು 27 — ತನ್ನ ಬೇಡಿಕೆ ಗಳ ಬಗ್ಗೆ ಸರ್ಕಾರದ ಗಮನ ಸೆಳೆವ ಸ ಲುವಾಗಿ ಮಾರ್ಚ್ 19 ನೇ ತಾ|| ದಕ್ಷಿ ಣ ಭಾರತ ನರ್ಸ್ ಗೆಜೆಟೆಡ್ ಅಧಿಕಾರಿ ಗಳು ಪ್ರತಿಭಟನಾ ದಿನವಾಚರಣೆ ಮಾಡಲು ದಕ್ಷಿಣ ಭಾರತ ನರ್ಸ್ ಗೆಜೆಟೆಡ್ ಆ ಫೀಸರ್‌ಸ್ ಸಂಘ ತನ್ನ ಪ್ರಥಮ ಸರ್ವ ಸದಲ್ಲಿ ನಿರ್ಧರಿಸಿದೆ.

ಸೇರ್ಪಡೆ ಆಯ್ಕೆರು

ಶ್ರೀನಗರ 26— ಲಾಲ್ ಚೌಕದಲ್ಲಿ ರಿಪಬ್ಲಿಕ್ ಡೇ ರ್ಯಾಲಿಯಲ್ಲಿ ಸೇರಿದ್ದ ಒಂದು ಲಕ್ಷಕ್ಕೂ ಮೇಲ್ಪಟ್ಟ ಸೇರಿದ್ದ ಜನರನ್ನು ಕುರಿತು ಪ್ರಧಾನಿ ಬಕ್ಷಿ ಗು ಲಾಂ ಮುಹಮದ್ದರು ಭಾಷಣ ಮಾಡು ತ್ತಾ, ಭಾರತಕ್ಕೆ ರಾಜ್ಯದ ಸೇರ್ಪಡೆಯು ಕಟ್ಟಕಡೆಗೆ ಆಗಿಹೋಗಿದ್ದು ಅ ದನ್ನು ಒದಲಾಯಿಸುವ ಮಾತೇ ಇಲ್ಲವೆಂದು ಹೇಳಿದರು : ಇದನ್ನು ಹಿಮಾಲಯಾದ ವೇಲಿನಿಂದ ಸಾರುತ್ತೇವೆಂದರು ; ಏನಾ ದರೂ ಕಾಶ್ಮೀರದಲ್ಲಿ ಪ್ಲಬಿಸೈಟ್ ಮಾ ತೇ ಇಲ್ಲವೆಂದರು.

**

ತಿರುಚಿರಪಳ್ಳಿ 24 — ತೆನ್ನೂರಿನ ಒಂ ದು ಬ್ಯಾಂಕಿನಲ್ಲಿ ಒಬ್ಬ ಮಹಿಳೆಯು 200 ರೂಗಳನ್ನು ತೆಗೆದುಕೊಂಡು ಚೀಲದಲ್ಲಿ ಹಾಕಿಕೊಂಡು ಮನೆಗೆ ಹೊರಟಿದ್ದಾ ಗ, ಒಂದು ಹದ್ದು ಬಂದು ಅ ದನ್ನು ಕಿತ್ತುಕೊಂಡುಹೋಯಿತು ; ಬ್ಯಾಂಕಿನ ಹತ್ತಿರದಲ್ಲಿದ್ದ ಮಾಂಸದ ಅಂಗಡಿಯಿಂದ ಕೊಂಡು ಹೋಗುತ್ತಿದ್ದವರಿಂದ ಪದಾರ್ಥ ಗಳನ್ನು ಕಿತ್ತುಕೊಂಡು ಹೋಗುತ್ತಿತ್ತು ; ಎರಡು ಅಂತಸ್ತಿನ ಮನೆಯ ಮೇಲೆ ಕೂ ತು, ಚೀಲದಲ್ಲಿ ತಿನ್ನುವ ಪದಾರ್ಥವಿಲ್ಲ ದ್ದನ್ನು ಕಂಡು ಚೀಲವನ್ನು ಅಲ್ಲೇ ಬಿ ಟ್ಟು ಹಾರಿಹೋಯಿತು ; ಜನರು ಹಣದ ಚೀಲವನ್ನು ಮಹಿಳೆಗೆ ತಂದುಕೊಟ್ಟರು.

ಸಾಲಗಾರರ ಪಟ್ಟಣ

ಜೋಹನ್ಸ್‌ಬರ್ಗ್ (ದಕ್ಷಿಣ ಆಫ್ರಿಕ) ಸಾಲಗಾರರ ಮತ್ತು ದಿವಾಳಿಯಾ ದವರ ಪಟ್ಟಣವಾಗುತ್ತಿದೆ : 1957 ರಲ್ಲಿ 94241 ಮಂದಿ ಸಾಲವ ತೀರಿಸಲು ತಪ್ಪಿ ದ ಸಾಲಗಾರರ ಮೇಲೆ ಸಮರ್ಪಗಳು ಹೊಂಟಿದ್ದವು ; ಒಂದೇ ದಿವಸ 1191 ಸಮ ನ್ಸುಗಳು ಹೊಂಟಿದ್ದವು — ಆ ವರ್ಷ 291 ವ್ಯಾಪಾರ ಮತ್ತು ಪ್ರೈವೇಟು ಸಂ ಸ್ಥೆಗಳು ದಿವಾಳಿಯಾದವು — ಜೋಹನ್ಸ್‌ಬರ್ಗ್ ನಗರವು ಕುಪ್ರಖ್ಯಾತ ಸಾಲ ಗಾರರ ನಗರವಾಗುತ್ತಿದ್ದು ವ್ಯಾಪಾರಸ್ಥರಿಗೆ ತುಂಬಾ ತೊಂದರೆಯಾಗಿದೆ — ಅನೇಕ ಸಣ್ಣ ಅಂಗಡಿಯವರು ಸಾಲದ ಹೊರೆಯಿಂದ ತಮ್ಮ ವ್ಯಾಪಾರವನ್ನು ತ್ಯಜಿಸುತ್ತಿದ್ದಾರೆ.

ಎರಡು ನಿಮಿಷಗಳ ಮೌನ

ತಾ|| 30 ರಂದು ಬೆಳಿಗ್ಗೆ 11 ಗಂಟೆಗೆ ಭಾರತ ಸ್ವಾತಂತ್ರ್ಯಕ್ಕಾಗಿ ವೀರಮರಣ ಹುತಾತ್ಮರಿಗೆ ಗೌರವ ಸಲ್ಲಿಸಲು ದೇಶಾದ್ಯಂತ 2 ನಿಮಿಷಗಳ ಕಾಲ ಎಲ್ಲ ಕೆಲಸ ಕಾರ್ಯಗಳೂ ನಿಲ್ಲಿಸಲ್ಪಟ್ಟಿರುವವು — ಅಧ್ಯಕ್ಷ ಪ್ರಸಾದರು ರಾಜ್‌ಘಾಟಿಗೆ ಭೇಟಿ ಕೊಟ್ಟು ರಾಷ್ಟ್ರಪಿತನ ಸಮಾಧಿಯ ಮೇಲೆ ಪುಷ್ಪವನ್ನರ್ಪಿಸುವರು

ಭಾರತಕ್ಕೆ ಸಾಲ

ವಿಶ್ವಬ್ಯಾಂಕು ಭಾರತಕ್ಕೆ ನಾಲ್ಕು ತಿಂಗಳಲ್ಲಿ ನೂರು ಮಿಲಿಯ ಡಾಲರು ಸಾಲ ಕೊಡುವದೆಂದು ಪ್ರಕಟವಾಗಿರುವದಾಗಿ ವಾಷಿಂಗ್ಟ್ ವಾರ್ತೆ.

ಬ್ಲೇಡುಗಳ ವಶ

ತಿರುವಾಂಕೂರು 24— ನಾಗೂರಿನಿಂದ ತಿರುಚಿಗೆ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದ ಗೋಪಾಲಯ್ಯರ್ ಎಂಬುವನಿಂದ ಅಕ್ರಮ ಸಾಗಾಣಿಕೆಗೆ ಒಳಪಟ್ಟಿದ್ದ ರೂ 2500 ಬೆಲೆಯ ರೇಜರು ಬ್ಲೇಡುಗಳನ್ನು ಪೋಲೀಸರು ವಶಪಡಿಸಿಕೊಂಡು, ಅತನನ್ನು ದಸ್ತಗಿರಿಮಾಡಿ ವಿಚಾರಣೆಗೊಳಪಡಿಸಿದರು.

ಪ್ರಜಾರಾಜ್ಯೋತ್ಸವ ಪ್ರಶಸ್ತಿಗಳು

ನವದೆಹಲಿ 26— ಒಂಭತ್ತನೇ ಪ್ರಜಾರಾಜ್ಯ ದಿನಸದ ಸಮಯದಲ್ಲಿ ರಾಷ್ಟ್ರಾಧ್ಯಕ್ಷರು ಉತ್ಕೃಷ್ಟ ರೀತಿಯಲ್ಲಿ ಸೇವೆ ಸಲ್ಲಿಸಿರುವ 27 ಪೋಲೀಸು ಅಧಿಕಾರಿಗಳಿಗೆ ಪ್ರಶಸ್ತಿ ಪದಕಗಳನ್ನು ದಯಪಾಲಿಸಿರುವರು ; ಹೀಗೆ ಪದಕಗಳನ್ನು ಪಡೆದಿರುವವರಲ್ಲಿ ಮೈಸೂರು ರಾಜ್ಯದ ಡೆಪುಟಿ ಪೋಲೀಸು ಸೂಪರಿಂಟೆಂಡೆಂಟರಾದ ಶ್ರೀ ಕೆ ಎಸ್ ನರಸಿಂಹಮೂರ್ತಿ ಮತ್ತು ಪೋಲೀಸು ಇನ್ಸ್‌ಪೆಕ್ಟರಾದ ಶ್ರೀ ಕೆ ಪಿ ವೆಂಕಟೇಶಮೂರ್ತಿಯವರೂ ಇರುವರು.

ವಾರ್ತಾತರಂಗ

ಮೈಸೂರಿನಲ್ಲಿರುವ ಸೆಂಟ್ರಲ್ ಫುಡ್ ಟೆಕ್ನೊಲಾಜಿಕಲ್ ರಿಸರ್ಚ್ ಇನ್ಸ್ಟಿಟ್ಯೂಟಿನ ಮಲ್ಟಿಪರ್ಪಸ್ ಫುಡ್ ಯೂನಿಟ್ಟನ್ನು ಮೈಸೂರು ಸರಕಾರವು ವಹಿಸಿಕೊಳ್ಳಲು ನಿರ್ಧರಿಸಿರುವುದೆಂದು ಇನ್ಸ್ಟಿಟ್ಯೂಟಿನ ಪೆ, ಸ್ ಸೋ ಟು ತಿಳಿಸುತ್ತದೆ.

ಬೆಂಗಳೂರು 24— ಭೂಮಿಯನ್ನು ಉತ್ತಮ ಪಡಿಸುವ ಶಾಸನವನ್ನು ಮಾಡಲು ಮಂತ್ರಿಮಂಡಲದ ಸಭೆಯಲ್ಲಿ ಅನುಮೋದಿಸಲಾಯಿತು — ಅಂಚ ಸ್ವೀಕರಿಸಿದ ಅವಾದನೆಗೆ ಗುರಿಯಾಗಿ ಇಲಾಖಾ ವಸೂಲಿ ವಿಚಾರಣೆಗೊಳಪಡಿಸಲ್ಪಟ್ಟಿದ ಬೆಂಗಳೂರು ವಿದ್ಯಾಭಾಸ ಇಲಾಖೆ ಡೆಪ್ಯೂಟಿ ಡೈರೆಕ್ಟರವರ ಆಫೀಸಿನ ಗುಮಾಸ್ತೆ ಅಹಮದ್ ಷರೀಫನ್ನು ಖುಡ್ತಾಯವಾಗಿ ನಿವೃತ್ತಿ ಪಡಿಸಬೇಕೆಂದು ಮಂತ್ರಿಮಂಡಲದಲ್ಲಿ ನಿರ್ಧರಿಸಲಾಯಿತು

ಕಲ್ಕತ್ತಾ 24— ಈ ದಿನದ ಕುದುರೆ ಜೂಜಿನಲ್ಲಿ ಟ್ರಿಬ್ಬಲ್ ಈವೆಂಟಿನ 12 ಟಿಕೀಟುಗಳಿಗೆ ತಲಾ ರೂ 5230-50 ನ ಪೈ. ದೊರೆತವು

ಮಾಸ್ಕೊ 24— ಭಾರತದ ಗಣರಾಜ್ಯ ಘೋಷಣೆಯ ಗೌರವಾರ್ಥವಾಗಿ ಎಸ್ಕೋಯಾದ ಸ್ಕೂಲು, ಆಫೀಸು, ಫ್ಯಾಕ್ಟರಿಗಳಲ್ಲಿ ಭಾರತದ ಚೀಎತಕ್ರಮ, ಸ್ವಾತಂತ್ರ್ಯದ ಹೋರಾಟ, ಹೊಸರಾಜ್ಯ ಸ್ಥಾಪನೆ ಮುಂತಾದವುಗಳ ವಿಚಾರವಾಗಿ ಉಪನ್ಯಾಸಗಳನ್ನು ಏರ್ಪಡಿಸಲಾಗಿವೆ.

ಜಡ್ಜಿ — ನೀನು ಹಣದ ಜೊತೆಗೆ ಆಭರಣಗಳನ್ನು ಬಟ್ಟೆಬರೆಗಳನ್ನು ಕದ್ದಿದ್ದುಂಟೊ ?

ಅಪರಾಧಿ — ಹೌದು ಮಹಾಸ್ವಾಮಿ, ಹಣವೊಂದೇ ಸುಖವನ್ನು ತರಲಾರದು ಎಂದು ನನಗೆ ಹೇಳಲಾಗಿತ್ತು.

ವುಡ್‌ಲಾಂಡ್ಸ್ ಜಯಪ್ರದ 3 ನೇ ವಾರ

ದೇವಾನಂದ್ — ಕಲ್ಪನಾ ಕಾರ್ತಿಕ್ — ಶಶಿಕಲಾ ವಾತ್ಸವಹಿಸಿರುವ

ನೌದೊಗ್ಗಾರ = Nau Do Gyara

ಅತ್ಯನೋಘ ಹಿಂದಿ ಚಿತ್ರ — ದಿನವಹಿ 3 ಪ್ರದರ್ಶನಗಳು

ಅಪೆರಾ— ಕೀರ್ತಿಯುತ 6 ನೇ ವಾರ

ಮಾಯಾಬಜಾರ್

ಎ. ಟಿ. ರಾಮುಡು, ಸಾವಿತ್ರಿ, ರಂಗರಾವ್, ನಾಗೇಶ್ವರರಾವ್, ಲೀಲಂಗಿ

ಅಭಿನಯಿಸಿರುವ ಮನಮೋಹಕ ಕನ್ನಡ ಚಿತ್ರ

ಪ್ರತಿ ದಿನ 3 ಆಟಗಳು

ಉಮಾ ಟಾಕೀಸ್ 25-1-58 ರಿಂದ

ಕಾವೇರಿ (ತಮಿಳು) [ದಿನ 3 ಆಟಗಳು]

ನಟವರ್ಗ— ಶಿವಾಜಿ ಗಣೇಶ್, ಪದ್ಮಿನಿ, ಕೃಷ್ಣ, ಮಧುರಂ

ಬೇಗಿನ ಪ್ರದರ್ಶನ 10-30 ಕ್ಕೆ — ತಾ || 31 ರಿಂದ 3 ದಿವಸಗಳು ಮಾತ್ರ

PATHFINDER (Technicolor Picture)

SHAKTI SUDHA

A Superb Tonic

Protect the cow ಗೋ ಸಂರಕ್ಷಣೆ ಮಾಡಿ

ಗೋರಕ್ಷಣಾ ಕಾರ್ಯಕ್ಕೆ ಹೆಚ್ಚು ಪ್ರಚಾರ ನಡೆಯಲಿ

ಗೋರಕ್ಷಣ ಪತ್ರಿಕೆಗೆ ಬೊಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ಮುಂತಾದ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ ; ವರ್ಷಕ್ಕೆ 8 ಆಣೆ ಅಂಚೆವೆಚ್ಚ

ಬೆಂಬಲಿಗರು ರೂ 10 (ಒಂದೇಸಾರಿ) ಇವರಿಗೆ ಪತ್ರಿಕೆ ಸದಾ ಕೊಡಲಾಗುವುದು

ಗೋರಕ್ಷಣ ಪತ್ರಿಕೆಯಲ್ಲಿ ಪ್ರಕಟಿಸಲು ಅನುಕೂಲವಾದ ಲೇಖನಗಳನ್ನು ವಾರ್ತೆಗಳನ್ನೂ ಸಾದರದಿಂದ ಸ್ವೀಕರಿಸಲಾಗುವುದು.

Advertise in Goraksana and help the pious cause

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

Edited, Printed& Published by Dharma Prachara Ni... M S Krishna Rao at the Satyavadi Press Chamarajapuram Mysore